**<u>1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ, ಸಿಂದಗಿ.</u>**

ಸಿ.ಸಿ.ನಂ.**27/2024**
ಸಿ.ಡಬ್ಲೂ.**19**
ಪಿ.ಡಬ್ಲೂ.**17**

| | |
|---|---|
| ಸಾಕ್ಷಿದಾರರ ಹೆಸರು | - ತಾಜುವುದ್ದಿನ ಶೇಖ |
| ತಂದೆಯ/ಗಂಡನ ಹೆಸರು | - ಶೇಖಸಾಬ |
| ವಯಸ್ಸು | - 55 ವರ್ಷ |
| ಉದ್ಯೋಗ | - ಎ.ಎಸ್.ಐ |
| ವಾಸಸ್ಥಳ | - ಆಲಮೇಲ |

<u>ಸಾಕ್ಷಿಯನ್ನು ದಿನಾಂಕ **12.02.2026** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>
<u>ಮುಖ್ಯ ವಿಚಾರಣೆ : ಎ.ಪಿ.ಪಿ. ರವರಿಂದ</u>

ದಿ: 28.11.2022 ರಿಂದ ಇಲ್ಲಿಯವರೆಗೆ ನಾನು ಎ.ಎಸ್.ಐ ಆಲಮೇಲ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ:10.05.2023 ರಂದು ರಾತ್ರಿ 8.00 ಗಂಟೆಯಿಂದ ನಾನು ಠಾಣಾ ಪ್ರಭಾರದಲ್ಲಿ ದಿ: 11.05.2023 ರಂದು ಬೆಳಗಿನ ಜಾವ 3.00 ಗಂಟೆ ಸುಮಾರಿಗೆ ಚಾಸಾ.1 ಇವರು ಠಾಣೆಗೆ ಹಾಜರಾಗಿ ಕೊಟ್ಟಂತ ಪಿರ್ಯಾದಿಯನ್ನು ಪಡೆದುಕೊಂಡು ಗುನ್ನೆ ನಂ.50/2023 ರಲ್ಲಿ ಪ್ರಕರಣ ನೊಂದಾಯಿಸಿಕೊಂಡು ಪ್ರವವವನ್ನು ಮಾನ್ಯ ನ್ಯಾಯಾಲಯಕ್ಕೆ ಅದರ ಪ್ರತಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ಬೆಳಿಗ್ಗೆ 7.00 ಗಂಟೆ ಸುಮಾರಿಗೆ ಚಾ.ಸಾ.2 ಮತ್ತು 3 ರವರ ಸಮಕ್ಷಮ ಪಿರ್ಯಾದಿಯ ಆಕಾಶ ನೀಲಿ ಬಣ್ಣದ ಶರ್ಟನ್ನು ಜಪ್ತಿ ಪಡಿಸಿಕೊಂಡು ಅದು ಛಾಯಾಚಿತ್ರವನ್ನು ಸಹ ತೆಗೆದಿರುತ್ತೇನೆ. ನಂತರ ಚಾ.ಸಾ.1 ರವರು ತೋರಿಸಿದ ಸ್ಥಳದಲ್ಲಿ ಅದೇ ದಿನ ಬೆಳಿಗ್ಗೆ 8.45 ರಿಂದ 9.45 ರವರೆಗೆ ಕಲಹಳ್ಳಿ ಬಸನಿಲ್ದಾಣದ ಹತ್ತಿ ಸ್ಥಳ ಪಂಚನಾಮೆ ಜರುಗಿಸಿ ಒಂದು ಛಾಯಾಚಿತ್ರವನ್ನು ಸಹ ತೆಗೆದಿರುತ್ತೇನೆ. ಅದೇ ದಿನ ಚಾ.ಸಾ.15 ಮತ್ತು 16 ರವರ ಹೇಳಿಕೆ ಪಡೆದು ಕೇಸಿನ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ಕೇಸಿನ ಕಡತವನ್ನು ಚಾ.ಸಾ.20 ರವರಿಗೆ ಹಸ್ತಾಂತರಿಸಿರುತ್ತೇನೆ.

ನಿ.ಪಿ.1 ನೋಡುತ್ತಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.1 ಬಿ ಎಂದು, ನಿ.ಪಿ.2 ನೋಡುತ್ತಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.2 ಡಿ ಎಂದು, ನಿ.ಪಿ.4 ನೋಡುತ್ತಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.4 ಡಿ ಎಂದು, ಪಂಚನಾಮೆ ಕಾಲಕ್ಕೆ ತೆಗೆದ ಎರಡು ಛಾಯಾಚಿತ್ರಗಳನ್ನು

ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿ.ಪಿ.3 ಮತ್ತು 5 ಎಂದುಗುರುತಿಸಲಾಗಿದೆ. ಪ್ರ.ವ.ವ.ನ್ನು ನೋಡುತ್ತಿದ್ದು ಅದನ್ನು ನಿ.ಪಿ.10 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.10 ಎ ಎಂದು ಗುರುತಿಸಲಾಯಿತು. ಮು.ಮಾ.1 ನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು : ಆರೋಪಿ ಪರ ಶ್ರೀ.ಬಿ.ಜಿ.ಎನ್.. ವಕೀಲರಿಂದ</u>

ದಿ: 10.05.2023 ರಂದು ಚಾ.ಸಾ.1 ರವರು ನೀಡಿದ ತಪ್ಪು ಮಾಹಿತಿ ಮೇರೆಗೆ ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಚಾ.ಸಾ.1 ರವರ ಶರ್ಟನ್ನು ಠಾಣೆಯ ಆವರಣದಲ್ಲಿ ನಿ.ಪಿ.4 ಪಂಚನಾಮೆ ಮೂಲಕ ಜರುಗಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನಿ.ಪಿ.2 ಸ್ಥಳ ಪಂಚನಾಮೆ ಚಾ.ಸಾ.2 ಮತ್ತು 3 ರವರ ಸಮಕ್ಷಮ ಜರುಗಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾ.ಸಾ.15 ಮತ್ತು 16 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾಧಿ ಸ್ವಿಕರಿಸಿದ ಕಾಲಕ್ಕೆ ಯಾವ ಕಾರಣಕ್ಕಾಗಿ ಪಿರ್ಯಾದಿಯನ್ನು ಅಂಗಿಯನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ ಎಂದರೆ ಸಾಕ್ಷಿ ಪಂಚರು ಆ ಸಮಯದಲ್ಲಿ ಸಿಗಲಿಲ್ಲ ಎಂದು ನುಡಿಯುತ್ತಾರೆ. ಚಾ.ಸಾ.1 ರವರು ಸರಕಾರಿ ಅಧಿಕಾರಿ ಆದ ಕಾರಣ ಆತನ ಮಾತು ಕೇಳಿ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ಕ್ಕೆ ಮತ್ತು ಈ ಗುನ್ಹೆಗೆ ಯಾವುದೇ ರೀತಿ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ಸಾಕ್ಷಿಯ ಹೇಳಿಕೆಯಂತೆ ತೆರೆ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸರಿ ಇದೆ.

**( ಎ.ಆರ್.ಎ.ಮುಲ್ಲಾ)**
1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಸಿಂದಗಿ.